<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>
<u>ಸಿ.ಸಿ.389/2022</u>

| | | |
|---|---|---|
| ಸಾಕ್ಷಿದಾರರ ಹೆಸರು | : ಸುರೇಶ್ | ಫ್ರಾಸಾ -2 |
| ತಂದೆಯ ಹೆಸರು | : ಕೃಷ್ಣಪ್ಪ ಪೂಜಾರಿ | ಚಾಸಾ-2 |
| ವಯಸ್ಸು | : 43 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ26.09.2024 |
| ವಾಸಸ್ಥಳ | : ಕಿತ್ತಲೆಗಂಡಿ | |

<u>:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಪರಿಚಯ ಇದೆ. ಅವರು ನಮ್ಮ ಊರಿನವರು. ಚಾಸಾ-1 ನನ್ನ ಪತ್ನಿ. ಚಾಸಾ-4 ರಿಂದ 6 ರವರು ನಮ್ಮ ಊರಿನವರು,

ದಿ.18.11.2021 ರಂದು ರಾ.10.00 ಗಂಟೆ ಸಮಯಕ್ಕೆ ನಾನು ಇಲ್ಲದಿದ್ದಾಗ ಆರೋಪಿಯು ನನ್ನ ಮನೆಗೆ ಬಂದು ಚಾಸಾ-1 ರವರ ಮೇಲೆ ಬಲತ್ಕಾರ ಮಾಡಲು ಪ್ರಯತ್ನಿಸಿದ್ದು ಅದಕ್ಕೆ ಚಾಸಾ-1 ರವರು ವಿರೋಧಿಸಿದಾಗ ಆರೋಪಿಯು ಚಾಸಾ-1 ರವರ ಮುಖಕ್ಕೆ ತನ್ನ ಕೈಯಿಂದ ಹೊಡೆದು ಚಾಸಾ-1 ರವರ ಮೈಮೇಲೆ ಇದ್ದ ಬಟ್ಟೆಯನ್ನು ಹರಿದು ಹಾಕಿರುತ್ತಾರೆ. ಈ ವಿಚಾರವನ್ನು ನಿನ್ನ ಗಂಡನಿಗೆ ಹೇಳಿದರೆ ಅವರನ್ನು ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ ಎಂದು ಚಾಸಾ-1 ರವರು ನನಗೆ ಹೇಳಿದರು. ಆ ದಿನ ನಾನು ರಾ.10.30 ಕ್ಕೆ ಕೆಲಸ ಮುಗಿಸಿ ನಾನು ಮನೆಗೆ ವಾಪಸ್ಸು ಬಂದೆ. ಚಾಸಾ-1 ರವರು ರಾ.11.15 ರ ಸಮಯಕ್ಕೆ ಎಲ್ಲಾ ವಿಚಾರವನ್ನು ನನಗೆ ಹೇಳಿದರು. ಮರುದಿನ ದಿ.19.11.2021 ರಂದು ನಾನು ಚಾಸಾ-4 ರಿಂದ 6 ರವರಿಗೆ ಸದರಿ ವಿಷಯವನ್ನು ತಿಳಿಸಿದಾಗ ಅವರು ಆರೋಪಿಯನ್ನು ಕರೆಸಿ ವಿಚಾರ ಮಾಡಿ ಬುದ್ದಿ ಹೇಳಿದರು. ಆದರೂ ಸಹಾ ಆರೋಪಿ ತನ್ನ ಚಾಳಿ ಮುಂದುವರಸಿ ಚಾಸಾ-1 ರವರನ್ನು ಬಲತ್ಕಾರ ಮಾಡಿರುವುದಾಗಿ ಊರಿನವರೊಂದಿಗೆ ಹೇಳಿಕೊಂಡು ತಿರುಗಾಡಿದ್ದಾರೆ. ಈ ಕಾರಣಕ್ಕಾಗಿ ಚಾಸಾ-1 ರವರು ಮನನೊಂದು ದಿ.21.11.2021 ರಂದು ಮನೆಯಲ್ಲಿ ಇದ್ದ ಕೀಟನಾಶಕವನ್ನು ಕುಡಿದು ಸಾಯುತ್ತಿದ್ದೇನೆ ಎಂದು ಬೆ.10.00 ಗಂಟೆ ನನಗೆ ಕರೆ ಮಾಡಿ ಹೇಳಿದ್ದರು. ತಕ್ಷಣ ನಾನು ಮನೆಗೆ ಬಂದು ಚಾಸಾ-1 ರವರನ್ನು ಯಾವುದೋ ವಾಹನದ ಮೂಲಕ ಮೂಡಿಗೆರೆ ಸರ್ಕಾರಿ ಆಸ್ಪತ್ರೆಗೆ ಸೇರಿಸಿ ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಹಾಸನ ಸರ್ಕಾರಿ ಆಸ್ಪತ್ರೆಗೆ ಸೇರಿಸಿರುತ್ತೇನೆ. ದಿ.22.11.2021 ರಂದು ಮೂಡಿಗೆರೆ ಪೋಲಿಸರು ಹಾಸನದ ಆಸ್ಪತ್ರೆಗೆ ಬಂದು ಚಾಸಾ-1 ರವರನ್ನು ವಿಚಾರಿಸಿ ಹೇಳಿಕೆ ಪಡೆದಿರುತ್ತಾರೆ. ಸಾಕ್ಷಿಯು ಎಂ.ಒ.3 ರ ಕೀಟನಾಶಕದ ಪ್ಯಾಕೇಟ್ ನ್ನು ನೋಡಿ ಗುರುತಿಸುತ್ತಾರೆ.

<u>ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ಎಂ.ಆರ್ ವಕೀಲರಿಂದ:</u>

ದಿ.18.11.2021 ರಂದು ಆಸಿಫ್ ರವರ ಟ್ರಾಕ್ಟರ್ ಗೆ ಮೂಲರಹಳ್ಳಿಯಲ್ಲಿ ಸೌದೆ ಲೋಡಿಂಗ್

ಕೆಲಸಕ್ಕೆ ಹೋಗಿದ್ದೆ. ಟ್ರಾಕ್ಟರ್ ಲೋಡ್ ಆದಾಗ ರಾ.10.00 ಆಗಿತ್ತು ಆದರೆ ಲೋಡ್ ಆದ ಕಾರಣ ಆ ತೋಟದಲ್ಲಿಯೇ ಟೈಯರ್ ಸಿಕ್ಕಿಹಾಕಿಕೊಂಡಿತ್ತು. ಅಲ್ಲಿಂದ ಹೊರಡುವಾಗ ರಾ.10.15 ಆಗಿತ್ತು. ಮೂಲರಹಳ್ಳಿಯಿಂದ ಕಿತ್ತಲೆಗಂಡಿಗೆ ಸೌದೆ ಅನ್ ಲೋಡ್ ಮಾಡಿದ್ದು ಸೌದೆಯನ್ನು ಯಾರಿಗೆ ಕೊಟ್ಟೆವು ಎಂದು ನನಗೆ ಗೊತ್ತಿಲ್ಲ. ಆ ದಿನ ನನ್ನೊಂದಿಗೆ ಯಾರು ಯಾರು ಬಂದಿದ್ದರು ಎಂದು ಅವರ ಹೆಸರು ಗೊತ್ತಿಲ್ಲ. ಅವರೆಲ್ಲರು ಬೈಕ್ ಗಳಲ್ಲಿ ಬಂದಿದ್ದರು. ಮೂಲರಹಳ್ಳಿಯಿಂದ ಕಿತ್ತಲೆಗಂಡಿಗೆ 20-25 ಕಿ.ಮೀ ಇದ್ದು ಒಂದು ಗಂಟೆಯ ಕಾಲ ಬೇಕಾಗುತ್ತದೆ. ಸೌದೆ ಅನ್ ಲೋಡ್ ಮಾಡಲು 15 ನಿಮಿಷವಾಯಿತು. ಆ ದಿನ ನಾನು ಸಂಬಳ ಪಡೆದಿಲ್ಲ. ಸೌದೆ ಅನ್ ಲೋಡ್ ಮಾಡಿದ ಸ್ಥಳದಿಂದ ನಮ್ಮ ಮನೆ 200 ಮೀಟರ್ ದೂರ ಇತ್ತು. ನಾನು ಶುದ್ಧವಾಗಿ ಮನೆಯ ಒಳಗೆ ಹೋಗಲು 5 ನಿಮಿಷ ಬೇಕಾಯಿತು.

ಮಲಗಿದ ಮೇಲೆ ಚಾಸಾ-1 ರವರು ನನಗೆ ವಿಷಯ ತಿಳಿಸಿದರು. ಆ ದಿನ ನಾನು ಊಟ ಮಾಡುವಾಗ ರಾ.10.15 ಆಗಿತ್ತು. ಆ ಸಮಯಕ್ಕೆ ನಾನು ಪ್ರತೀದಿನ ತೋಟದ ಕೆಲಸಕ್ಕೆ ಹೋಗಿ ಸಂಜೆ ಸಮಯಕ್ಕೆ ಟ್ರಾಕ್ಟರ್ ಲೋಡ್ ಮಾಡಲು ಹೋಗುತ್ತಿದ್ದೆ. ಲೋಡ್ ಮಾಡಿದ ಟ್ರ್ಯಾಕ್ಟರ್ ನ ನೋಂದಣಿ ಸಂಖ್ಯೆ ನನಗೆ ಗೊತ್ತಿಲ್ಲ. ಆಸಿಫ್ ರವರ ಮನೆಯೂ ಸಹಾ ಕಿತ್ತಲೆಗಂಡಿಯಲ್ಲಿ ಇದೆ. ನನಗೆ ಇಬ್ಬರು ಮಕ್ಕಳು. ಅವರು ಶಾಲೆಗೆ ಹೋಗುತ್ತಾರೆ. 2021 ನೇ ಇಸವಿಯಲ್ಲಿ ನನ್ನ ಮಗ ಶಾಲೆಗೆ ಹೋಗುತ್ತಿದ್ದ ಆದರೆ ನನ್ನ ಮಗಳು ಹೋಗುತ್ತಿರಲಿಲ್ಲ. ದಿ.18.11.2021 ರಂದು ಶಾಲೆ ಇತ್ತು. ಆ ದಿನ ನಾನು ಮನೆಗೆ ಹೋದಾಗ ನನ್ನ ಮಗಳು ಮಲಗಿದ್ದರು. ಚಾಸಾ-3 ರವರು ನನ್ನ ತಂದೆ. ಚಾಸಾ-4 ರವರು ಬಿಜೆಪಿ ಪಕ್ಷದವರು ಎಂದರೆ ಸರಿ. ಚಾಸಾ-5 ರವರು ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ನಾವಿಬ್ಬರು ಒಂದೇ ಜಾತಿಯವರು ಎಂದರೆ ಸರಿ. ದಿ.18.11.2021 ರಂದು ಚಾಸಾ-1 ರವರು ಯಾರ ತೋಟದ ಕೆಲಸಕ್ಕೆ ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿಯ ಪತ್ನಿ ಹಾಗೂ ಚಾಸಾ-1 ರವರು ಒಟ್ಟಿಗೆ ಕೆಲಸಕ್ಕೆ ಹೋಗುವುದಿಲ್ಲ.

ಆರೋಪಿ ಕಿತ್ತಲೆಗಂಡಿಯ ಬಾಡಿಗೆ ಮನೆಯಲ್ಲಿ ವಾಸವಿದ್ದಾರೆ. ಆ ಮನೆಯ ಮಾಲೀಕರ ಹೆಸರು ನನಗೆ ಗೊತ್ತಿಲ್ಲ. ನನ್ನ ಮನೆಯಿಂದ ಆರೋಪಿಯ ಮನೆಗೆ 500 ಮೀಟರ್ ಅಂತರ ಇದೆ. ನಮ್ಮಿಬ್ಬರ ಮನೆಯ ನಡುವೆ ಒಂದು ಮನೆ ಇದೆ. ದಿ.18.11.2021 ಕ್ಕೂ ಮೊದಲು ಆರೋಪಿ ಚಾಸಾ-1 ರವರನ್ನು ಬಲತ್ಕಾರ ಮಾಡಲು ಪ್ರಯತ್ನಿಸಿದರು ಎಂದು ನಾನು ಹೇಳಿಕೆ ಕೊಟ್ಟಿಲ್ಲ. ನನ್ನ ಮನೆ 30x40 ವಿಸ್ತೀರ್ಣದ್ದು. ಶೌಚಾಲಯಕ್ಕೆ ಹೋಗುವ ಮಾರ್ಗದಲ್ಲಿ ಇರುವ ಕೊಟ್ಟಿಗೆ ಬಳಿ ಬಲತ್ಕಾರ ಮಾಡಲು ಪ್ರಯತ್ನಿಸಿದರು ಎಂದು ಚಾಸಾ-1 ರವರು ನನಗೆ ತಿಳಿಸಿದರು. ಆ ಕೊಟ್ಟಿಗೆಗೆ ಬೆಳಕಿನ ವ್ಯವಸ್ಥೆ ಇದೆ. ಆ ದಿನ ಚಾಸಾ-1 ರವರು ಯಾವ ಬಣ್ಣದ ಬಟ್ಟೆ ಧರಿಸಿದ್ದರು ಎಂದು ನನಗೆ ನೆನಪಿಲ್ಲ ಆದರೆ ನೈಟಿ ಧರಿಸಿದ್ದರು. ಆರೋಪಿಗೆ ಮಕ್ಕಳಿದ್ದಾರೆ ಎಂದರೆ ಸರಿ. ಬಟ್ಟೆಯ ಎಡಭಾಗವನ್ನು ಹರಿದುಹಾಕಿದ್ದರು. ನಾನು ಮನೆಗೆ ವಾಪಸ್ಸು

ಹೋದಾಗ ಆ ಬಟ್ಟೆಯನ್ನು ತೆಗೆದು ಇಟ್ಟಿದ್ದರು. ಚಾಸಾ-1 ರವರು ನನಗೆ ವಿಚಾರ ತಿಳಿಸಿದ ನಂತರ ನಾನು ಆ ಬಟ್ಟೆಯನ್ನು ಪರಿಶೀಲಿಸಿದೆ. ದಿ.19.11.2021 ರಂದು ನಾನು ಚಾಸಾ-4 ರಿಂದ 6 ರವರಿಗೆ ವಿಚಾರ ತಿಳಿಸಿದ್ದೆ. ಆ ದಿನ ಬೆ.9.00 ಗಂಟೆಗೆ ಪಂಚಾಯಿತಿಯಾಯಿತು. ಆ ದಿನ ನಾನು ಕೆಲಸಕ್ಕೆ ಹೋಗಿರಲಿಲ್ಲ. ಆರೋಪಿ ನಮ್ಮ ಊರಿನವರಿಗೆ ವಿಚಾರ ಹೇಳಿದ್ದು ಯಾರು ಯಾರಿಗೆ ಹೇಳಿದ್ದರು ಎಂದು ಅವರ ಹೆಸರುಗಳು ನನಗೆ ಗೊತ್ತಿಲ್ಲ.

ದಿ.18.11.2021 ರ ನಂತರ ಆರೋಪಿ ನಮ್ಮ ಮನೆಗೆ ಬಂದು ತೊಂದರೆ ಕೊಟ್ಟಿಲ್ಲ. ಚಾಸಾ-1 ರವರ ಮುಖಕ್ಕೆ ಪೆಟ್ಟಾಗಿರಲಿಲ್ಲ. ನಾನು ಹೇಳಿದಂತೆ ಯಾವುದೇ ಘಟನೆಯಾಗಿಲ್ಲ ಎಂದರೆ ಸರಿಯಲ್ಲ. ದಿ.21.11.2021 ರಂದು ನಾನು ವಿಶ್ವಮಿತ್ರ ಎಂಬುವವರ ತೋಟದ ಕೆಲಸಕ್ಕೆ ಹೋಗಿದ್ದೆ. ಆ ದಿನ ಬೆ.8.30 ಗಂಟೆಗೆ ಕೆಲಸಕ್ಕೆ ಹೋಗಿ ಬೆ.10.00 ಗಂಟೆಯವರೆಗೂ ಕೆಲಸ ಮಾಡಿದ್ದೆ. ಆ ದಿನ ನಾನು ಕೆಲಸ ಮಾಡುತ್ತಿದ್ದ ಸ್ಥಳದಿಂದ ನನ್ನ ಮನೆಗೆ 300 ಮೀಟರ್ ಅಂತರ ಇತ್ತು. ಆ ದಿನ ನನಗೆ ದೂರವಾಣಿ ಕರೆ ಬಂದಿದ್ದ ದೂರವಾಣಿ ಸಂಖ್ಯೆ ನನಗೆ ನೆನಪಿಲ್ಲ. ಬೆ.9.30 ಕ್ಕೆ ನನಗೆ ಕರೆ ಬಂದಿತ್ತು. ಆ ದಿನ ನಾನೊಬ್ಬನೇ ಮನೆಗೆ ವಾಪಸ್ಸು ಬಂದೆ. ನಮ್ಮ ಮನೆಯಲ್ಲಿ ಯಾವುದೇ ವಾಹನ ಇಲ್ಲ. ಆರೋಪಿಯು ಊರಿನವರ ಬಳಿ ಹೇಳಿಕೊಂಡು ತಿರುಗಾಡುತ್ತಿದ್ದರಿಂದ ಮನನೊಂದಿರುವುದಾಗಿ ಚಾಸಾ-1 ರವರು ಹೇಳಿದ್ದು ಹಾಗೇ ಹೇಳಿದ ದಿನಾಂಕ ನನಗೆ ನೆನಪಿಲ್ಲ. ಕೀಟನಾಶಕದ ಹೆಸರು ನನಗೆ ಗೊತಿಲ್ಲ ಆದರೆ ಅದು ಮೆಣಸಿನ ಕಿಡಕ್ಕೆ ಹಾಕುವ ಕೀಟನಾಶಕ. ಅದನ್ನು ನನ್ನ ತೋಟದ ಉಪಯೋಗಕ್ಕಾಗಿ ನಾನೇ ತಂದು ಇಟ್ಟಿದ್ದೆ. ಹಾಗೇ ತಂದಿದ್ದ ಕೀಟನಾಶಕ ಅರ್ಧ ಕೆ.ಜಿ. ಇದ್ದು ಅದರಲ್ಲಿ ಸ್ವಲ್ಪ ಸಿಂಪಡಸಿ ಸ್ವಲ್ಪ ಪುಡಿಯನ್ನು ಉಳಿಸಿಕೊಂಡಿದ್ದೆ. ಅದನ್ನು ಮನೆಯ ಹಿಂದೆ ಬ್ಯಾಗಿನಲ್ಲಿ ಇಟ್ಟಿದ್ದೆ. ಈ ವಿಚಾರ ಚಾಸಾ-1 ರವರಿಗೆ ತಿಳಿದಿತ್ತು.

ಆ ದಿನ ನಾನು ಮನೆಗೆ ಹೋದಾಗ ಚಾಸಾ-1 ರವರು ಕೀಟನಾಶಕ ಸೇವಿಸಿದ್ದರು. ಮನೆಗೆ ಬಂದಾಗ ಚಾಸಾ-1 ರವರು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಆ ಸಮಯಕ್ಕೆ ಮಕ್ಕಳು ಮನೆಯಲ್ಲಿ ಇರಲಿಲ್ಲ. ನಾನು ಮತ್ತು ಚಾಸಾ-1 ರವರು ಬೇರೆ ಬೇರೆಯಾಗಿ ಬೇರೆ ಬೇರೆ ಸಮಯಕ್ಕೆ ಕೆಲಸಕ್ಕೆ ಹೋಗುತ್ತೇವೆ. ನಾನು ಮತ್ತು ಚಾಸಾ-1 ರವರು ಅನ್ಯೂನ್ಯವಾಗಿದ್ದೇವೆ. ನನಗೂ ಆರೋಪಿಗೂ ವೈಮನಸ್ಸು ಇರಲಿಲ್ಲ. ಆರೋಪಿ ಮತ್ತು ಚಾಸಾ-1 ರವರು ಫೋನಿನಲ್ಲಿ ಮಾತನಾಡುತ್ತಿದ್ದ ವಿಚಾರ ನನಗೆ ಗೊತ್ತಿತ್ತು. ದೂರವಾಣಿ ಸಂಖ್ಯೆಗಳು ನನಗೆ ಗೊತ್ತಿಲ್ಲ. ದಿ.18.11.2021 ರಂತೆ ಆರೋಪಿಯು ಕೊಲೆ ಬೆದರಿಕೆ ಹಾಕಿದ್ದರು ಎಂದು ಚಾಸಾ-1 ರವರು ನನಗೆ ಹೇಳಿದ್ದರು. ಆ ಸಮಯದಲ್ಲಿ ನಾನು ಆರೋಪಿಗೆ ಕರೆ ಮಾಡಿ ಕೇಳಿಲ್ಲ. ನಾನು ಮತ್ತು ಆರೋಪಿ ಒಟ್ಟಿಗೆ ಕೆಲಸ ಮಾಡುವುದಿಲ್ಲ. ಅವರು ತೋಟದ ಕೆಲಸ ಮಾಡುತ್ತಾರೆ. ಬೆ.10.30 ರ ಸಮಯಕ್ಕೆ ಚಾಸಾ-1 ರವರನ್ನು ವಾಹನ ಆಟೋ ಏರಿಸಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ನಾನು ಹೇಳಿಕೆ ಕೊಡಲು ಪೋಲಿಸರ ನೊಟೀಸು ಕೊಟ್ಟಿರಲಿಲ್ಲ. ಹೇಳಿಕೆ ಕೊಡಲು ನಾನೊಬ್ಬನೇ ಠಾಣೆಗೆ ಹೋಗಿದ್ದೆ. ದಿ.22.11.2021

ರಂದು ಸ.4.00 ಗಂಟೆಗೆ ಪೋಲಿಸರು ಹಾಸನದ ಆಸ್ಪತ್ರೆಗೆ ಬಂದಿದ್ದರು. ಪೋಲಿಸರ ಹೆಸರು ನನಗೆ ಗೊತ್ತಿಲ್ಲ. ನಾನು ಯಾವ ದಿನಾಂಕ ನಾನು ಹೇಳಿಕೆ ಕೊಟ್ಟಿದ್ದೇನೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ಏನು ಹೇಳಿಕೆ ಬರೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಯ ಪತ್ನಿ ಹಾಗೂ ಚಾಸಾ-1 ರವರ ನಡುವೆ ಗಲಾಟೆಯಾಗಿತ್ತು ಎಂದರೆ ಸರಿಯಲ್ಲ. ಈ ಸಂಬಂಧ ಆರೋಪಿ ಚಾಸಾ-1 ರವರಿಗೆ ಕೇಳಿದ್ದರು ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಆರೋಪಿ ಹಾಗೂ ಅವರ ಪತ್ನಿಯ ಮೇಲೆ ಚಾಸಾ-1 ರವರಿಗೆ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ಈಗಾಗಿ ಆರೋಪಿಯ ವಿರುದ್ದ ಸುಳ್ಳು ದೂರು ಕೊಡಲಾಗಿದೆ ಎಂದರೆ ಸರಿಯಲ್ಲ. ಆರೋಪಿಗೂ ಪ್ರಕರಕ್ಕೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಘಟನೆಯಾಗಿದ್ದರೆ ಅದೇ ದಿನ ದೂರು ಕೊಡುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಹಾಗೂ ಚಾಸಾ-1 ರವರ ನಡುವೆ ಇದ್ದ ವೈಮನಸ್ಸಿನ ಕಾರಣ ಚಾಸಾ-1 ರವರು ಕೀಟನಾಶಕ ಸೇವಿಸಿದ್ದರು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.